ಜೊತೆಯಲ್ಲಿಯೇ ರಾಮ್ ಲಾಲನನ್ನು ರೈಲಿನಲ್ಲಿ ದಿಲ್ಲಿಗೆ ಕರೆತಂದಿದ್ದ. ಒಂದೂ ಮುಕ್ಕಾಲು ದಿನ ಪ್ರಯಾಣ ಮಾಡಿ ದಿಲ್ಲಿಯಲ್ಲಿ ಇಳಿದಾಗ ಒಂದು ರೀತಿಯ ಅನಾಥ ಭಾವ ಮೂಡುವುದರೊಂದಿಗೆ ಹಳ್ಳಿಯ ತನ್ನ ತಂದೆ ತಾಯಿಗಳ ಪರಿಸ್ಥಿತಿ ಕಣ್ಮುಂದೆ ಸುಳಿದಿತ್ತು. ಅಕ್ಕನ ಮದುವೆ ಮಾಡಲು ಅಪ್ಪ ಮಾಡಿದ್ದ ಸಾಲ ಇನ್ನೂ ಅರ್ಧ ಹಾಗೇ ಉಳಿದುಕೊಂಡಿತ್ತು. ತಂಗಿಗೆ ಹನ್ನೆರಡು ವರ್ಷಗಳು ತುಂಬಿ ಇನ್ನೇನು ಅವಳೂ ಮದುವೆಗೆ ಒದಗುವವಳಿದ್ದಳು. ತಮ್ಮ ಹತ್ತನೆಯ ತರಗತಿ ಎರಡು ಸಬ್ಜೆಕ್ಟ್‌ಗಳಲ್ಲಿ ಫೇಲಾಗಿ ಅಪ್ಪ ಅಮ್ಮನೊಂದಿಗೆ ಇದ್ದ ಎರಡೆಕರೆಯಲ್ಲಿ ಒಣ ಬೇಸಾಯ ಮಾಡಿಕೊಂಡಿದ್ದ. ರಾಮ್ ಲಾಲ್ ದಿಲ್ಲಿಗೆ ಹೊರಡಲು ರೈಲು ಹತ್ತಿದಾಗ ತಿಂಡಿ, ತಿನಿಸು, ಗೋಧಿ ಹಿಟ್ಟು, ತುಪ್ಪ ಎಲ್ಲವನ್ನೂ ಚೀಲದಲ್ಲಿ ತುಂಬಿ ಕಳುಹಿಸುವಾಗ ಮಗ ಸಾವಿರ ಮೈಲಿ ದೂರದ ಶಹರಿಗೆ ಹೋಗುತ್ತಾನೆಂದು ರಾಮ್ ಲಾಲನ ಅಮ್ಮ ಕಣ್ತುಂಬ ನೀರು ತುಂಬಿಕೊಂಡಿದ್ದಳು. ಹಾಗಾಗಿ ದಿಲ್ಲಿಯಲ್ಲಿ ಇಳಿದಾಗ ರಾಮ್ ಲಾಲನಿಗೆ ಅನಾಥ ಭಾವ ಕಾಡಿದರೂ ಬದುಕಿನ ಬಗ್ಗೆ ಎದೆಯ ಮೂಲೆಯಲ್ಲೆಲ್ಲೋ ಭದ್ರವಾದ ಛಲ ಮೂಡಿ ಮಾನಸಿಕವಾಗಿ ಗಟ್ಟಿಯಾಗಿದ್ದ.

ಸೋಮದೇವ ರಾಮ್ ಲಾಲನನ್ನು ರೈಲು ನಿಲ್ದಾಣದಿಂದ ಬಸ್ಸಿನಲ್ಲಿ ಕರೆತಂದು ಪರಿಚಯವಿದ್ದ ಯುವಕನ ರೂಮಿನಲ್ಲಿ ಬಿಟ್ಟ. ರೂಮು ಚಿಕ್ಕದಾಗಿದ್ದರೂ ಇಬ್ಬರು ಇರಲು ಅಡ್ಡಿಯಿರಲಿಲ್ಲ. ರೂಂಮೇಟ್ ಕೂಡ ಬಿಹಾರಿಯಾದ್ದರಿಂದ ಹೊಂದಿಕೊಳ್ಳಲು ಅಂಥ ಕಷ್ಟವೇನೂ ಆಗಲಿಲ್ಲ. ಜೊತೆಗೆ ರಾಮ್ ಲಾಲನಿಗೆ ಚಪಾತಿ, ಅನ್ನ, ಸಬ್ಜಿ ಮತ್ತು ಚಿಕನ್ ಫ್ರೈ ಚನ್ನಾಗಿ ಮಾಡಲು ಬರುತ್ತಿದ್ದರಿಂದ ರೂಂಮೇಟ್‌ಗೆ ಖುಷಿಯೇ ಆಗಿತ್ತು. ಅದೂ ಅಲ್ಲದೆ ರಾಮ್ ಲಾಲನಿಗೆ ಯಾರೊಂದಿಗಾದರೂ ಸರಿ, ಹೊಂದಿಕೊಂಡು ಹೋಗುವ ದೊಡ್ಡ ಗುಣವಿತ್ತು. ಹದಿನೈದು ದಿನಗಳ ಕಾಲ ರಾಮ್ ಲಾಲನನ್ನು ಸೋಮದೇವ ತಾನು ಕೆಲಸ ಮಾಡುತ್ತಿದ್ದ ಹೋಟೆಲ್‌ನಲ್ಲೆ ಕೆಲಸಕ್ಕೆ ನೇಮಿಸಿದ್ದ. ಆದರೆ ರಾಮ್ ಲಾಲನಿಗೆ ಹೋಟೆಲ್ ಕೆಲಸ ಸರಿ ಬಂದಿರಲಿಲ್ಲ. ಕಷ್ಟಪಟ್ಟು ದುಡಿಯುವ ಶರೀರ ಅವನದು. ಹಾಗಾಗಿ ಸೋಮದೇವ ತನ್ನ ಪರಿಚಯವಿರುವವರನ್ನು ಹಿಡಿದು 'ದಿಲ್ಲಿ ಸ್ಟೀಲ್ಸ್' ಎಂಬ ಕಂಪನಿಯಲ್ಲಿ ಕೆಲಸ ಕೊಡಿಸಿದ್ದ. ಕೈಗಾರಿಕಾ ಪ್ರದೇಶದಲ್ಲಿದ್ದ ಸ್ಟೀಲ್ ಫ್ಯಾಕ್ಟರಿಯಲ್ಲಿ ಸ್ಟೀಲ್ ರಾಡ್‌ಗಳನ್ನು ಡಿಸ್ಪಾಚ್ ಮಾಡುವ ಕೆಲಸ ಅವನದು. ತಿಂಗಳಿಗೆ ಹದಿನಾಲ್ಕು ಸಾವಿರ ಸಂಬಳ. ಅವನಿದ್ದ ರೂಮಿನ ಜಾಗದಿಂದ ನಾಲ್ಕು ಕಿಲೋಮೀಟರ್ ದೂರವಿತ್ತು ಅವನು ಕೆಲಸ ಮಾಡುತ್ತಿದ್ದ ಫ್ಯಾಕ್ಟರಿ. ಅವನಿದ್ದ ಏರಿಯಾದ ಹೆಸರು 'ಆನಂದ ವಿಹಾರ್' ಎಂಬುದಾಗಿತ್ತು ಮತ್ತು ಬಸ್‌ಸ್ಟ್ಯಾಂಡ್‌ಗೆ ಅರ್ಧ ಕಿಲೋಮೀಟರ್ ದೂರವಿತ್ತು. ಹಾಗೂ ಬಸ್‌ಸ್ಟ್ಯಾಂಡ್ ಹೆಸರು ಕೂಡ 'ಆನಂದ ವಿಹಾರ್' ಎಂಬುದಾಗಿತ್ತು. ಅದು ದಿಲ್ಲಿಯಲ್ಲಿ ಹೆಸರುವಾಸಿಯಾಗಿತ್ತು. ಆ ಬಸ್‌ಸ್ಟ್ಯಾಂಡ್ ಸದಾ ಜನಸಂದಣಿಯಿಂದ ಗಿಜಿಗುಡುತ್ತಿತ್ತು. ನೂರಾರು ಬಸ್ಸುಗಳು, ಆಟೊಗಳು, ಟ್ಯಾಕ್ಸಿಗಳು ಜನರನ್ನು ಅಲ್ಲಿಂದ ಬೇರೆ ಬೇರೆ ಊರುಗಳಿಗೆ, ಕೈಗಾರಿಕಾ ಪ್ರದೇಶಗಳಿಗೆ ಒಯ್ಯುತ್ತಿದ್ದವು. ನೂರಾರು ದಿನಗೂಲಿ ಕಾರ್ಮಿಕರು ಅಲ್ಲಿ ಬಂದು ಸೇರುತ್ತಿದ್ದರು. ಮೇಸ್ತ್ರಿಗಳು, ಲೇಬರ್ ಗುತ್ತಿಗೆದಾರರು ಬಂದು ಅಲ್ಲಿಂದ ಕೆಲಸಗಾರರನ್ನು ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಬಂದು ನಿಂತ ಯಾವೊಬ್ಬ ಕಾರ್ಮಿಕನಿಗೂ ಕೆಲಸ ಸಿಗದೆ ಇರುತ್ತಿರಲಿಲ್ಲ. ಬೇರೆ ಬೇರೆ ದೂರದ ಊರುಗಳಿಂದ, ರಾಜ್ಯಗಳಿಂದ ಕೆಲಸ ಹುಡುಕಿಕೊಂಡು ಬಂದಿರುವ ವಲಸೆ ಕಾರ್ಮಿಕರು ದಿಲ್ಲಿಯಲ್ಲಿ ಎಂಟು ಲಕ್ಷಕ್ಕಿಂತಲೂ ಅಧಿಕವಾಗಿರುವರೆಂದು ಯಾವುದೋ ಮಾತು ಬಂದಾಗ ರಾಮ್ ಲಾಲನಿಗೆ ಅವನ ರೂಂಮೇಟ್ ಹೇಳಿದ್ದ. ಫ್ಲೈ ಓವರ್ ಕೆಳಗೆ ನೂರಾರು ಜನ ಮಲಗಿರುವುದು ಬೆಳಗಿನ ಹೊತ್ತು ಅಲ್ಲಿ ಓಡಾಡುವಾಗ ರಾಮ್ ಲಾಲನ ಕಣ್ಣಿಗೆ ಬೀಳುತ್ತಿತ್ತು.

ರಾಮ್ ಲಾಲ್ ಕೆಲಸಕ್ಕೆ ಸೇರಿದ ಎರಡು ತಿಂಗಳಲ್ಲಿಯೇ ಕಂಪನಿಯಲ್ಲಿ ಒಳ್ಳೆಯವನೆಂದು ಹೆಸರು